ಶ್ರೀ ವೀರೇಂದ್ರ ಪಾಟೀಲ್.—ತಾವು ಹೇಳಿದ ವಿಚಾರ ಪರಿಶೀಲನೆಯಲ್ಲಿರುವುದರಿಂದ ಇವತ್ತು ಏನೂ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಶಿವಪ್ಪ.—ಹಿಂದೆ ಪ್ರಜಾಪ್ರತಿನಿಧಿ ಸಭೆ ಅಂತ ದಸರಾ ಕಾಲದಲ್ಲಿ ಜಗನ್ ಮೋಹನ ಅರಮನೆಯಲ್ಲಿ ಹತ್ತು ದಿವಸ ಸೆಷನ್ ನಡೆಯುತ್ತಾ ಇತ್ತು, ಅದೇ ರೀತಿ ಈಗಲೂ ಕೂಡ ಅಲ್ಲಿ ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಇವೆ, ಅರಮನೆ ಕೂಡ ಇದೆ, ಇವತ್ತು ಮಹಾರಾಜರು ದರ್ಬಾರು ಮಾಡುತ್ತಾ ಇದ್ದ ಸ್ಥಳದಲ್ಲಿ ಶಾಸನ ಸಭೆಯನ್ನು ನಡೆಸಬಹುದೇ ಎಂಬುದನ್ನೂ ಕೂಡ ಯೋಚನೆ ಮಾಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಅನೇಕ ಸೂಚನೆಗಳನ್ನು ಹೇಳಿದ್ದಾರೆ. ಮತ್ತು ಇನ್ನೂ ಅನೇಕ ಸೂಚನೆಗಳು ಇರಬಹುದು. ನಾನು ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ ಲಿಖಿತಮೂಲಕವಾಗಿ ಸಲಹೆ ಮಾಡಿದರೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ದುರ್ದೈವ ಇವತ್ತಿನ ಪರಿಸ್ಥಿತಿ ಏನೆಂದರೆ ಇದಕ್ಕೆ ರಾಜಕೀಯ ಬಣ್ಣ ಕಟ್ಟುವಂತಹ ಜನ ಇದ್ದಾರೆ, ಮಾನ್ಯ ಚನ್ನೇಗೌಡರು ಹೇಳಿದ ಹಾಗೆ ಮೈಸೂರು ನಗರದಲ್ಲಿರುವಂತಹ ವ್ಯಾಪಾರಸ್ಥರು ಮತ್ತು ಇನ್ನೂ ಅನೇಕ ಜನರು ಈ ಒಂದು ದಸರಾ ನಂಬಿಕೊಂಡೇ ಸುಮಾರು 3-4 ತಿಂಗಳು ಗಾಫಜೀವನ ಮಾಡುತ್ತಿದ್ದರು, ಅವರಿಗೆ ಒಂದು ಆಘಾತವಾಗಿದೆ ಅದಕ್ಕಾಗಿಯೇ ಮುಂದಿನ ಪರ್ಷ ದಸರಾ ಉತ್ಸವವನ್ನು ವೈಭವದಿಂದ ಆಚರಿಸುವುದಕ್ಕೆ ಯಾವ ತರಹ ಅಡ್ಡಿ ಆತಂಕ ಬರದಂತೆ ಮಾಡಬೇಕು, ಹೆಚ್ಚಿನ ಜನರ ಗಮನ ಸೆಳೆಯಬೇಕು, ಹೆಚ್ಚು ಜನರು ಬರುವಂತೆ ಮಾಡಬೇಕೆನ್ನುವುದು ನಮ್ಮ ಮನಸ್ಸಿನಲ್ಲಿದೆ. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಡುತ್ತಾರೋ ಅದನ್ನು ಕಮಿಟಿಯ ಮುಂದೆ ಕಳುಹಿಸುತ್ತೇನೆ, ಅವರ ಸಲಹೆಯ ಮೇರೆ ಸೂಕ್ತವಾಗಿ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

Held over Short Notice Question No. 3 *re*: Nomination to the Senates of the Karnatak and the Bangalore University.

ಶ್ರೀ ಕೆ. ಪಿ. ನಾಡಗೌಡ.—ಕರ್ನಾಟಕ ಯೂನಿವರ್ಸಿಟಿ ಸೆನೆಟ್‌ಗೆ ಪುಟ್ಟಪ್ಪನವರನ್ನು ನಾಮಕರಣ ಮಾಡುವಾಗ ಸರ್ಕಾರದವರು ರೆಕಮಂಡೇಷನ್ ಮಾಡಿದ್ದರೇ ಇಲ್ಲವೇ ಎಂಬುದು ಮಹತ್ವದ ವಿಷಯ. May I know whether the Government has recommended to the Chancellor about his nomination ?

ಶ್ರೀ ಕೆ. ಪಿ. ಶಂಕರಗೌಡ.—ಆಕ್ಟ್ ಪ್ರಕಾರ ಚಾನ್ಸ್‌ಲರರವರು ಸರ್ಕಾರದವರನ್ನು ಕೇಳಬೇಕೆಂದು ಇಲ್ಲ. ಅವರಿಗೆ ಅಲ್ಲಿನ ಜನಗಳ ಪರಿಚಯ ಇಲ್ಲದೇ ಇರುವುದರಿಂದ ನಮ್ಮನ್ನು ಕೇಳುತ್ತಾ ಇದ್ದೇನೆ ಎಂದು ಹೇಳಿ ಕನ್‌ಸಲ್ಟ್ ಮಾಡಿದರು. ಈ ರೆಕಮಂಡೇಷನ್ ಮಾಡುವಾಗ ಅವರು ಸೆನೇಟ್‌ನಲ್ಲಿ ಸೋತಿದ್ದರು ಅಂತ ಹೇಳಿ ಸರ್ಕಾರದವರ ಗಮನಕ್ಕೆ ಬಂದಿರಲಿಲ್ಲ, ಮೇಲಾಗಿ ಆಕ್ಟ್‌ನಲ್ಲಿ ಸೋತವರನ್ನು ನಾಮಿನೇಟ್ ಮಾಡಬಾರದು ಅಂತ ಹೇಳಿ ಅಂತಹ ಅಡ್ಡಿ ಏನೂ ಇಲ್ಲ.

ಶ್ರೀ ಕೆ. ಪಿ. ನಾಡಗೌಡ.—ನೈತಿಕ ದೃಷ್ಟಿಯಿಂದ ಸೋತವರನ್ನು ನಾಮಿನೇಟ್ ಮಾಡುವುದು ಯೋಗ್ಯವಲ್ಲ ಎನ್ನುವ ದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪಿ. ಶಂಕರಗೌಡ.—ಅದು ಯೋಗ್ಯವಲ್ಲ ಎಂದು ಛಡಿಛೆನೆಟ್ಟಾಗಿ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಔಟ್‌ಸ್ಟಾಂಡಿಂಗ್ ಪರ್‌ಸನ್ಯಾಲಿಟಿ ಆಗಿದ್ದರೆ, ಸೋತಿದ್ದರೂ ಅವರನ್ನು ನಾಮಕರಣ ಮಾಡಬಹುದು.

ಶ್ರೀ ಎಂ. ನಾಗಪ್ಪ.—ಸೆನೆಟ್ ಎಲೆಕ್ಷನ್‌ಗೆ ನಿಂತಿರುವ ವಿಷಯ ಗೊತ್ತಿಲ್ಲ ಎಂದು ಹೇಳಿದರು. ಈಗಲಾದರೂ ಅವರು ಸೆನೆಟ್ಟಿಗೆ ಮತ್ತು ಸಿಂಡಿಕೇಟಿಗೆ ನಿಂತು ಸೋತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಹಾಗೆ ಗಮನಕ್ಕೆ ಬಂದರೆ, ಈ ವಿಷಯ ಪುನರಾಲೋಚನೆ ಮಾಡಿ ಬೇರೆ ಹೆಸರುಗಳನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಒಂದು ಸಾರಿ ನಾಮಕರಣ ಮಾಡಿದ ಮೇಲೆ ಅದನ್ನು ಕಿತ್ತು ಹಾಕುವುದಕ್ಕೆ ಎಕ್ಕಿನಲ್ಲಿ ಅವಕಾಶ ಇಲ್ಲ. ಆದುದರಿಂದ ಈಗ ಆದದ್ದೂ ಆಗಿಹೋಗಿದೆ, ಮುಂದೆ ಅವರನ್ನು ಕಿತ್ತು ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಮಾನ್ಯ ಮಂತ್ರಿಗಳು ಇವರು ಚುನಾವಣೆಯಲ್ಲಿ ಸೋತಿರಲಿಲ್ಲ ಎನ್ನತಕ್ಕಂಥದ್ದು ನಾಮಕರಣ ಮಾಡಿದಾಗ ನಮಗೆ ಗೊತ್ತಿರಲಿಲ್ಲ ಎಂದು ಹೇಳಿದರು. ಇವರನ್ನು ನಾಮಕರಣ ಮಾಡಬೇಕಾದರೆ ವಿಶ್ವವಿದ್ಯಾನಿಲಯದವರನ್ನು ಕೇಳಿ ಏನಾದರೂ ರಿಪೋರ್ಟ್ ತರಿಸಿಕೊಂಡಿದ್ದೀರಾ ಅಥವಾ ನಿಮಗೆ ಅವರಿಗೆ ಇರತಕ್ಕ ವೈಯಕ್ತಿಕ ಪರಿಚಯದ ಮೇರೆ ನೀವೇ ಶಿಫಾರಸ್ಸು ಮಾಡಿದ್ದೀರಾ? ಎರಡನೆಯದು ಗವರ್ನರ್‌ರವರು ನಿಮ್ಮನ್ನು ಕೇಳಬೇಕಾದಿಲ್ಲ, ನಿಮ್ಮನ್ನು ಇನ್‌ಫಾರ್ಮಲ್ ಆಗಿ ಕನ್‌ಸಲ್ಟ್ ಮಾಡಿದ್ದಾರೆ ಎಂದು ಹೇಳುತ್ತೀರಿ. ಅವರು ನಿಮ್ಮನ್ನು ಕೇಳಬೇಕೆ ಬೇಡವೇ ಎಂಬುದನ್ನು ಕಾನೂನು ದೃಷ್ಟಿಯಿಂದ ಅದನ್ನು ವಿಮರ್ಶೆ ಮಾಡಿನೋಡಿದ್ದೀರಾ? By virtue of his office as Chancellor, ಅವರಿಗೆ ತಿಳಿದಹಾಗೆ ಅವರು ಮಾಡುವುದಕ್ಕೆ ಅಧಿಕಾರ ಇದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಈಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ ಕಾನೂನು ದೃಷ್ಟಿಯಿಂದ ಪರಿಶೀಲನೆ ಮಾಡುತ್ತಾ ಇದ್ದೇವೆ; ಮುಂದೆ ಕಾನೂನು ದೃಷ್ಟಿಯಿಂದ ಯಾವುದು ಸರಿ ಎನ್ನುವುದು ಗೊತ್ತಾಗುತ್ತದೆ. ಆ ರೀತಿ ಮಾಡುತ್ತೇವೆ. ವೈಸ್‌ಚಾನ್ಸಲರ್ ಕೆಲವು ಹೆಸರುಗಳನ್ನು ರೆಕಮೆಂಡ್ ಮಾಡಿದ್ದಾರೆ. ಆಮೇಲೆ ವೈಸ್‌ಚಾನ್ಸಲರ್ ಮತ್ತು ನನ್ನನ್ನು ಇಬ್ಬರನ್ನು ಸೇರಿಸಿಕೊಂಡು ಕನ್‌ಸಲ್ಟ್ ಮಾಡಿದಾಗ ನಾವು ಪಾಟೀಲ್ ಪುಟ್ಟಪ್ಪನವರ ಹೆಸರನ್ನು ರೆಕಮೆಂಡ್ ಮಾಡಿದ್ದು ಉಂಟು.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ರಾಜ್ಯಪಾಲರಿಗೆ ಎಷ್ಟು ಜನರನ್ನು ರೆಕಮೆಂಡ್ ಮಾಡಿದ್ದೀರಾ ಮತ್ತು ಅವರ ಪೈಕಿ ಎಷ್ಟು ಜನರು ಒಪ್ಪಿಕೊಂಡಿದ್ದಾರೆ? ಎಷ್ಟು ಜನರು ರಾಜೀನಾಮೆಗಳನ್ನು ಸಲ್ಲಿಸಿದ್ದಾರೆ?

ಶ್ರೀ ಕೆ. ವಿ. ಶಂಕರಗೌಡ.—ಸುಮಾರು 8 ಜನ ಇರಬಹುದು ಎಂದು ಕಾಣುತ್ತದೆ. ಅವರಲ್ಲಿ ಒಬ್ಬರು ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ಬಹುತೇಕವಾಗಿ ಸರಕಾರದ ಬೆಂಬಲ ಪಡೆದಿರತಕ್ಕಂಥ ಅಧಿಕಾರಿಗಳು ಇರುವುದರಿಂದ ನಾಮಕರಣ ಪದ್ಧತಿಯನ್ನು ವಜಾ ಮಾಡಿ ಎಲ್ಲಾ ಸದಸ್ಯರುಗಳು ಚುನಾವಣೆಯಲ್ಲಿ ಬರುವಹಾಗೆ ಏರ್ಪಾಡುಮಾಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಇಂಟರೆಸ್ಟ್‌ಸ್ ಎಲೆಕ್ಷನ್ನಿನಲ್ಲಿ ಬರುವುದಕ್ಕೆ ಆಗುವುದಿಲ್ಲ. ಎಜ್ಯುಕೇಷನಲಿಸ್ಟ್‌ಸ್ ಅಥವಾ ಸೋಷಿಯಲ್ ಸರ್ವಿಸ್ ಮಾಡಿದವರು ಎಲೆಕ್ಷನ್ನಿನಲ್ಲಿ ಬರುವುದಕ್ಕೆ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ನಾಮಿನೇಷನ್ ಪದ್ಧತಿ ಇಟ್ಟುಕೊಂಡಿದೆ. ಆದುದರಿಂದ ನಾಮಿನೇಷನ್‌ನನ್ನು ಸಂಪೂರ್ಣವಾಗಿ ವಜಾ ಮಾಡಬೇಕು ಎನ್ನುವುದು ಅಷ್ಟು ಸೂಕ್ತವಾದುದು ಅಲ್ಲ.

ಶ್ರೀ ಆರ್. ಬಿ. ವಾಲಿ.—ಕರ್ನಾಟಕ ಯೂನಿವರ್ಸಿಟಿ ಅಟಾನಮಸ್ ಬಾಡಿ ಆಗಿರುವುದರಿಂದ ಅವರು ಮಾಡಿರುವ ರೆಕಮಂಡೇಷನ್ನನ್ನು ಒಪ್ಪಿಕೊಳ್ಳಲೇಬೇಕು ಎಂದು ಏನಾದರೂ ಪ್ರೊವಿಸೀಜರ್ ಇದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಚಾನ್ಸಲರ್ ಸರಕಾರದ ಜೊತೆಯಲ್ಲಿ ಕನ್‌ಸರ್ಟ್‌ಮಾಡಿ ಸೂಕ್ತವಾದ ಬದಲಾವಣೆ ಮಾಡಬಹುದು.

ಶ್ರೀ ಭೋಳಾ ರಘುರಾಮು ಶೆಟ್ಟಿ.—ಪ್ರಜಾಪ್ರಭುತ್ವದೊಳಗೆ ಚುನಾವಣೆ ಮೂಲಭೂತವಾದ ತತ್ವವಾಗಿದೆ. ಸೆನೆಟ್ ಎಲೆಕ್ಷನ್ನಿನಲ್ಲಿ ಸೋತುಹೋದವರನ್ನು ನಾಮಿನೇಟ್ ಮಾಡುವುದು ಪ್ರಜಾ ಪ್ರಭುತ್ವಕ್ಕೆ ಅಗೌರವವನ್ನು ತೋರಿಸಿದಂತಾಗುವುದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಅಂಥ ಅಗೌರವವೇನೂ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ಕಲ್ಯಾಣರಾವ್.—ಮಾನ್ಯ ಸದಸ್ಯರು ರಾಜೀನಾಮೆ ಕೊಟ್ಟವರ ಹೆಸರುಗಳನ್ನು ತಿಳಿಸುತ್ತೀರಾ? ಸೋತವರನ್ನು ಪುನಃ ನಾಮಕರಣ ಮಾಡುವುದರಿಂದ ಪ್ರಯೋಜನವೇನು?

ಶ್ರೀ ಕೆ. ವಿ. ಶಂಕರಗೌಡ.—ನಾಮಕರಣ ಮಾಡಿದ ಸದಸ್ಯರು ಶ್ರೀ ಡಿ. ಸಿ. ಪಾವಟೆ ಎನ್ನುವವರು. ಅವರು ರಾಜೀನಾಮೆ ಕೊಟ್ಟಿದ್ದಾರೆ. ಮಹದೇವಪ್ಪ ರಾಂಪುರೆ ಎಂಬುವವರನ್ನು ಚಾನ್ಸಲರ್ ಅವರು ನಾಮಕರಣ ಮಾಡಿದ್ದಾರೆ.

Sri A. R, BADRINARAYAN.—Can the Hon'ble Minister give a list of the educational and literary achievements of Mr. Puttappa which prompted the Government to recommend his name as a very special case?

Sri K. V. SHANKARA GOWDA.—We have not recommended it as a very special case. As I have stated already, I was not aware of the fact that he was defeated in the election. He is an M. P. He has worked in so many educational institutions. He is a very good journalist. In view of these considerations, we recommended his case.

ಶ್ರೀ ಕೆ. ಹೆಚ್. ಪಾಟೀಲ್.—ರಾಂಪುರೆ ಅವರ ಮೇಲೆ ಚಾರ್ಜಸ್ ಇದೆ. ಶ್ರೀ ಪಾಟೀಲ್ ಪುಟ್ಟಪ್ಪನವರ ಮೇಲೆ ಚಾರ್ಜಸ್ ಪೆಂಡಿಂಗ್ ಇದೆ. ನಿಜಲಿಂಗಪ್ಪನವರಮೇಲೂ ಸಹ ಚಾರ್ಜಸ್ ಪೆಂಡಿಂಗ್ ಇರುವುದು ತಮಗೆ ಸಾಕಷ್ಟು ಗೊತ್ತಿದೆ. ಅವರಿಗೆ ಎಜ್ಯುಕೇಷನಲ್ ಕ್ವಾಲಿಫಿಕೇಷನ್ಸ್ ಇಲ್ಲದೆ ಇದ್ದಾಗ್ಯೂ ಅವರನ್ನು ನರಕಾರದವರು ನಾಮಕರಣ ಮಾಡಿರುವುದರಿಂದ ಇವೆರಡು ಪೊಲಿಟಿಕರ್ ನಾಮಿನೇಷನ್ ಎಂದು ತಿಳಿದುಕೊಳ್ಳುವುದರಲ್ಲಿ ತಪ್ಪು ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇಲ್ಲ ಸ್ವಾಮಿ, ಪೊಲಿಟಿಕಲ್ ನಾಮಿನೇಷನ್ ಅಲ್ಲ. ಯೂನಿವರ್ಸಿಟಿ ಹಿತದೃಷ್ಟಿಯಿಂದ ಮಾಡಿದುದು.

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—ಸ್ಪೆಷಲ್ ಎಲಿಮೆಂಟ್ಸ್‌ನ್ನು ನಾಮಕರಣ ಮಾಡುವ ಪದ್ಧತಿಯ ಮೂಲಕ ತರಬೇಕು ಎನ್ನುವ ತತ್ವವನ್ನು ಮಾನ್ಯ ವಿದ್ಯಾ ಮಂತ್ರಿಗಳು ಒಪ್ಪಿ ಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ನಾಲ್ಕು ಯುನಿವರ್ಸಿಟಿಗಳು ಇವೆ. ಬೆಂಗಳೂರು, ಮೈಸೂರು ಮತ್ತು ಅಗ್ರಿಕರ್‌ಚರಲ್ ಯೂನಿವರ್ಸಿಟಿಗಳಲ್ಲಿ ಈ ಪರಿಶಿಷ್ಟವರ್ಗದವರನ್ನು ನಾಮಕರಣ ಮಾಡ ತಕ್ಕಂಥ ಒಂದು ಅವಕಾಶ ಇದೆ. ಆದರೆ ಕರ್ಣಾಟಕ ಯೂನಿವರ್ಸಿಟಿಯಲ್ಲಿ ಅಂತಹ ಅವಕಾಶ ಇಲ್ಲ. ಆದುದರಿಂದ ಅಲ್ಲಿಯೂ ಅಂತಹ ಅವಕಾಶವನ್ನು ಮಾಡಿಕೊಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಕರ್ಣಾಟಕ ಯೂನಿವರ್ಸಿಟಿಯಲ್ಲಿ ಶ್ರೀಮತಿ ಯಮುನಾಬಾಯಿ ಕರ್ಯಾಣಿ ಎಂಬುವವರು ಪರಿಶಿಷ್ಟ ವರ್ಗಕ್ಕೆ ಸೇರಿದವರು, ಅವರನ್ನು ನಾಮಕರಣ ಮಾಡಿದ್ದೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸೆನೆಟ್‌ಗೆ ನಾಮಿನೇಲ್ ಮಾಡುವ ನಂದರ್ಭದಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್ ಮತ್ತು ಇತರರನ್ನು ನಾಮಿನೇಟ್ ಮಾಡುತ್ತಾರೆ. ರಾಜ್ಯದಲ್ಲಿ 50 ಪರ್ಸೆಂಟ್ ಮಹಿಳೆಯರು ಇದ್ದರೂ ಕೂಡ ನಾಮಿನೇಟ್ ಮಾಡುವುದಿಲ್ಲ. ಅವರು ಫಾರ್‌ವರ್ಡ್ಸೋ, ಬ್ಯಾಕ್‌ವರ್ಡ್ಸೋ ?

ಶ್ರೀ ಕೆ. ವಿ. ಶಂಕರಗೌಡ.—ಒಬ್ಬ ಮಹಿಳೆಯನ್ನು ನಾಮಕರಣ ಮಾಡಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಹಿಂದೆಯೇ ಮೈಸೂರು ದೇಶದಲ್ಲಿ ಈ ರೀತಿ ಎಷ್ಟು ಸಾರಿ ನಾಮಿನೇಟ್ ಮಾಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ತಾವು ಹೇಳಿದಿರಿ, ಚುನಾವಣೆಯಲ್ಲಿ ಸೋತಿದ್ದು ಗಮನಕ್ಕೆ ಬರಲಿಲ್ಲ ಎಂದು. ಆದರೆ ತಾವು ಗವರ್ನರ್‌ಗೆ ಸಲಹೆ ಮಾಡಿದ ನಂದರ್ಭದಲ್ಲಿ ಚುನಾವಣೆ ಆಗಿತ್ತೇ ಇಲ್ಲವೇ ಮತ್ತು ಯಾರು ಯಾರು ಸೆನೆಟಿಗೆ ನಿಂತಿದ್ದರು ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಆಗ ಚುನಾವಣೆ ಆಗಿತ್ತು. ಆದರೆ ಅದು ನನ್ನ ಗಮನಕ್ಕೆ ಬಂದಿರಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಡೆಮಾಕ್ರೆಟಿಕ್ ಪ್ರಿನ್ಸಿಪಲ್ಸ್‌ನಲ್ಲಿ ನಂಬಿಕೆ ಇದ್ದರೆ ಸೋತ ಜನರನ್ನು ಕೌನ್ಸಿಲರ್‌ಗೆ ತೆಗೆದುಕೊಳ್ಳುವುದು ಪ್ರಜಾಪ್ರಭುತ್ವವನ್ನು ಅವಹೇಳನ ಮಾಡಿದಂತೆ ಆಗುತ್ತದೆ ಎಂದು ಗೊತ್ತಿದ್ದರೂ ಸಹ ಸೆನೆಟ ಚುನಾವಣೆಯಲ್ಲಿ ಸೋತಂಥ ಜನರನ್ನು ಮತ್ತೆ ಸೆನೆಟಿಗೆ ನಾಮಿನೇಟ್ ಮಾಡಿರುವುದು ಮರ್ಯಾದೆಗೆ ಧಕ್ಕೆ ತರುವ ವಿಷಯವಾಗಿದೆ. ಈಗ ಸಿಂಡಿಕೇಟಿಗೂ ಯಾರಾದರೂ ಸೋತಿದ್ದರೆ ಅಂತಹವರನ್ನು ಸಿಂಡಿಕೇಟಿಗೆ ನಾಮಕರಣ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ನಧ್ಯಕ್ಕೆ ಇಲ್ಲ. ಮುಂದೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಂಡಿತ ಜವಹರ್‌ಲಾಲ್ ನೆಹರೂರವರ ಕಾಲದಿಂದ ಸಾರ್ವಜನಿಕ ಚುನಾವಣೆಯಲ್ಲಿ ಸೋತಂಥವರನ್ನು ಅನೇಕ ಸಂಸ್ಥೆಗಳಿಗೆ ನಾಮಕರಣ ಮಾಡುವ ರೂಢಿ ಬೆಳೆದು ಬಂದಿದೆ. ತಾವು ಇಲ್ಲಿ ಸೆನೆಟಿಗೆ ನಾಮಕರಣ ಮಾಡುವಾಗ ಅದೇ ಒಂದು ಆಧಾರದ ಮೇಲೆ ಮಾಡಿದ್ದು ಅಲ್ಲವೇ ?

Sri K. V. SHANKARA GOWDA.—I cannot say all those things.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀಚನ್ನೇಗೌಡರ ಒಂದು ಪ್ರಶ್ನೆಗೆ ತಾವು ಉತ್ತರ ಕೊಡುತ್ತಾ ಕೆಲವರು ಚುನಾವಣೆಯಲ್ಲಿ ಆರಿಸಿಬರಲು ಕಷ್ಟವಾಗುವುದರಿಂದ ಅಂಥವರನ್ನು ನಾಮಕರಣ ಮಾಡಬೇಕಾಗುತ್ತದೆಂದು ಹೇಳಿದಿರಿ. ಇದು ವಿವಾದಾಸ್ಪದ ವಿಷಯ. ನಾಮಕರಣ ಮಾಡುವ ಸದಸ್ಯರಿಗೆ ಏನೇನೋ ಕ್ವಾಲಿಫಿಕೇಷನ್ಸ್ ಇರಬೇಕು ಮತ್ತು ಅಂತಹ ಕ್ವಾಲಿಫಿಕೇಷನ್ನಿಗೆ ಅನುಗುಣವಾಗಿ ಮಾನ್ಯ ಶ್ರೀ ಪಾಟೀಲ್ ಪುಟ್ಟಪ್ಪನವರೂ ಇದ್ದಾರೆಯೇ? ಅದನ್ನು ಎಕ್ಸಾಮಿನ್ ಮಾಡಿದ್ದೀರಾ?

ಶ್ರೀ ಕೆ. ವಿ. ಶಂಕರಗೌಡ.—ಇದರಲ್ಲಿ ಕ್ವಾಲಿಫಿಕೇಷನ್ಸ್ ಫಿಕ್ಸ್‌ಮಾಡಿಲ್ಲ. ಎಜುಕೇಷನಿಸ್ಟ್ ಆಗಿರಬೇಕು, ಎಜುಕೇಷನ್ ವಿಚಾರದಲ್ಲಿ ಹೆಚ್ಚಿಗೆ ಆಸಕ್ತಿ ಇರಬೇಕು, ಎಜುಕೇಷನ್ ಇನ್‌ಸ್ಟಿಟ್ಯೂಷನ್ ಗಳಲ್ಲಿ ಚೆನ್ನಾಗಿ ಕೆಲಸಮಾಡಿರಬೇಕು. ಮತ್ತು ಅದರಲ್ಲಿ ಸ್ಪೆಷಲಿಸ್ಟ್ಸ್ ಆಗಿರಬೇಕು ಎಂದು ಅವರನ್ನು ನಾಮಿನೇಟ್ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸತ್ಸಂಪ್ರದಾಯ ಇರುವವರು ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರು ಚುನಾವಣೆಗೆ ನಿಲ್ಲುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಶ್ರೀ ಪಾಟೀಲ್ ಪುಟ್ಟಪ್ಪನವರನ್ನು ಅಲ್ಲಿಗೆ ನಾಮಕರಣ ಮಾಡಿದ್ದಾರೆಂದು ಮಾನ್ಯ ಸಚಿವರು ಹೇಳಿದರು. ಇವರಿಗಿಂತ ಮಿಗಿಲಾಗಿ ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರು ಈ ರಾಜ್ಯದಲ್ಲಿ ಅನೇಕ ಜನರು ಇದ್ದಾಗ್ಯೂ ಅಂತಹವರನ್ನು ಏಕೆ ಇಲ್ಲಿಗೆ ನಾಮಕರಣ ಮಾಡಲಿಲ್ಲ?

ಶ್ರೀ ಕೆ. ವಿ. ಶಂಕರಗೌಡ.—ಈಗ ನಾಮಕರಣ ಮಾಡಿರುವವರು ಆ ಗುಂಪಿಗೇ ಸೇರಿರುವವರು.

ಶ್ರೀ ಕೆ.ಎಸ್ ನಾಗರತ್ನಮ್ಮ.—ಹಿಂದೆ ಜವಹರ್‌ಲಾಲ್ ನೆಹರೂ ಅವರು ಯಾರಾದರೂ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಸೋತು ಹೋದರೆ ರಾಜ್ಯ ಸಭೆಯ ಚುನಾವಣೆಯಲ್ಲಿ ಸೋತು ಹೋದರೆ, ಅಥವಾ ಇಂತಹ ಅಸೆಂಬ್ಲಿ ಚುನಾವಣೆಯಲ್ಲಿ ಸೋತು ಹೋದರೆ, ಅಂತಹವರನ್ನು ಪುನಃ ಪಾರ್ಲಿಮೆಂಟಿಗೆ ನಾಮಕರಣ ಮಾಡಿದ್ದಾರೆ? ಅಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ನಾನು ಈ ಪ್ರಶ್ನೆಗೆ ಉತ್ತರವನ್ನು ಹೇಳಬಯಸುವುದಿಲ್ಲ.

ಶ್ರೀ ಕೆ. ಪಿ. ನಾಡಗೌಡ.—ಮಾನ್ಯ ಶ್ರೀ ಪುಟ್ಟಪ್ಪನವರನ್ನು ಅವರ ಯೋಗ್ಯತೆ ತಿಳಿದುಕೊಂಡು ರಾಜ್ಯಪಾಲರಿಗೆ ಶಿಫಾರಸು ಮಾಡಿ ಸೆನೆಟ್ಟಿಗೆ ಅವರನ್ನು ನಾಮಕರಣ ಮಾಡಿದ್ದೀರಿ? ಅವರು ಸೆನೆಟ್ ಎಲೆಕ್ಷನಿನಲ್ಲಿ ಕೇವಲ 3 ಓಟುಗಳನ್ನು ತೆಗೆದುಕೊಂಡಿದ್ದರು ಅವರನ್ನೇ ಚಾನ್ಸಲರ್ ನಾಮಕರಣ ಮಾಡಿದರು. ಆದರೂ ಅವರ ಯೋಗ್ಯತೆ ಎಷ್ಟು ಎಂಬುದನ್ನು ನೋಡಬೇಕು. ಆದ್ದರಿಂದ ಈಗ ಕರ್ನಾಟಕ ಯೂನಿವರ್ಸಿಟಿ ಆಕ್ಟನ್ನು ಸ್ವಲ್ಪ ದುರಸ್ತುಮಾಡಿ ಬೆಂಗಳೂರು ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ಹೇಗೆ ವೈಸ್ ಚಾನ್ಸಲರ್ ಅವರನ್ನು ನೇಮಕಮಾಡುತ್ತಾರೋ ಹಾಗೆ ಅಲ್ಲಯೂ ಒಂದು ವ್ಯವಸ್ಥೆ ಮಾಡಿ ಮಾನ್ಯ ಶ್ರೀ ಪಿ. ಎಂ. ನಾಡಗೌಡ ಅವರನ್ನು ವೈಸ್ ಚಾನ್ಸಲರಾಗಿ ಮಾಡುವ ಪ್ರಶ್ನೆ ಇದೆಯೇ?

ಶ್ರೀ ಕೆ. ವಿ. ಶಂಕರಗೌಡ.—ನಾನು ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

QUESTIONS FOR ANSWERS ON THE DAY

(but not taken up)

Filling up of posts of Government Pleader and Public Prosecutor at Gulbarga Court

146. Sri D. B. KALMANKAR (Aland).—

Will the Minister for Law, Labour and Parliamentary Affairs be pleased to state :—

(*a*) the names of the Government Advocate and Public Prosecutor at Gulbarga Court;